

ಬಿಸಿ ಮಾಡಿ ಸುಬ್ರೊ ಬಡಿಸಿದ. ರಾತ್ರಿ ಎಂಟಾದರೂ ಹೊರಗೆ ಹಗಲಿನಂತೆ ಬೆಳಕಿತ್ತು. ‘ಸಮ್ಮರ್‌ಲ್ಲಿ ಹಗಲು ದೊಡ್ಡದು ಇಲ್ಲಿ’ ಎಂದ ಸುಬ್ರೊ. ಮಧ್ಯಾಹ್ನ ಶುಭ್ರ ನೀಲಿಯ ಬಿಸಿಲು ಆಹ್ಲಾದಕರವಾಗಿತ್ತು. ಈಗ ಮೋಡ ಕವಿದು ವಾತಾವರಣದಲ್ಲಿ ಖಿನ್ನತೆ ಆವರಿಸಿದೆ. ರೆಡ್‌ಲೇಡಿ ಎಂದು ಸ್ಟಿಕರ್ ಅಂಟಿಸಿದ ಇಬ್ಬನಿ

ತಾಜಾ ಸೇಬು ಕತ್ತರಿಸಿ, ಬಸಿಯಲ್ಲಿ ಹೋಳಿಟ್ಟು, ‘ಅಪ್ಪಾ ನಿನಗೆ ಇದು ಪಸಂದ್ ಹೌದಿಲ್ಲೊ’ ಎಂದ. ‘ಧಾರವಾಡದ ಮಂಗಳವಾರ ಸಂತಿ ದಿನ ಪ್ರತಿ ಸರ್ತಿ ನಾನು ಸೇಬು ತರ್ತಿದ್ದದ್ದು ನೆನಪೈತೇನು?’ ರಾವ್ ಭಾವುಕರಾದರು. ಕಲ್ಯಾಣಿಯ ನೆನಪು ತಮ್ಮನ್ನು ಮೌನವಾಗಿಸಲು ಬಿಡಬಾರದು ಎಂದು ಇಬ್ಬರೂ